ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 2401922
E-mail : neehtgoiys@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.) ರವರ ಕಛೇರಿ
ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪ-ವಿಭಾಗ, ಹೂಟಗಳ್ಳಿ,
ಮೈಸೂರು.

ಕ್ರ.ಸಂ: ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಹೂ. 636-637

ದಿನಾಂಕ : 23.06.2017

## ಸಭಾ ನಡಾವಳಿ

ಹೂಟಗಳ್ಳಿ ಉಪವಿಭಾಗದಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ದಿನಾಂಕ : 08.06.2017 ರಂದು ಬೆಳಗ್ಗೆ 11 :00 ಗಂಟೆಗೆ ಜನ ಸಂಪರ್ಕ ಸಭೆಯನ್ನು ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು :-

1. ಶ್ರೀಯುತ ನರಸಿಂಹೇಗೌಡ, ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾ.ವಿ.ಸ.ನಿ.ನಿ, ಮೈಸೂರು.
2. ಶ್ರೀ. ಕೇಶವಮೂರ್ತಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪವಿಭಾಗ, ಮೈಸೂರು
3. ಶ್ರೀಮತಿ ಮಂಜುಳಾ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಉಪವಿಭಾಗ, ಮೈಸೂರು
4. ಶ್ರೀ ಮಂಜುನಾಥ, ಸಹಾಯಕ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ,
5. ಶ್ರೀ ಸಂದೀಪ್, ಸಹಾಯಕ ಇಂಜಿನಿಯರ್(ವಿ), ಬೋಗಾದಿ ಶಾಖೆ.
6. ಶ್ರೀ ಎಂ. ನಾಗೇಂದ್ರ, ಕಿರಿಯ ಇಂಜಿನಿಯರ್(ವಿ), ಬೀರಿಹುಂಡಿ ಶಾಖೆ.
7. ರಾಘವೇಂದ್ರ ಹೆಚ್.ಎ, ಕಿರಿಯ ಇಂಜಿನಿಯರ್(ವಿ), ಇಲವಾಲ ಶಾಖೆ
8. ಸೋಮಶೇಖರ್, ಕಿರಿಯ ಇಂಜಿನಿಯರ್(ವಿ). ಹೂಟಗಳ್ಳಿ ಶಾಖೆ.

ಸಭೆಗೆ ಹಾಜರಿದ್ದ ಗ್ರಾಹಕರು :

1. ರವಿಕುಮಾರ್, ವಿಜಯನಗರ 1ನೇ ಹಂತ, ಮೈಸೂರು.
2. ಮಹದೇವ, ಹಿನಕಲ್, ಮೈಸೂರು.
3. ರಂಗಪ್ರಸಾದ್ ಕೆ.ಹೆಚ್.ಬಿ ಕಾಲೋನಿ, ಹೂಟಗಳ್ಳಿ, ಮೈಸೂರು.
4. ಭಾಗ್ಯ, ಹಿನಕಲ್, ಮೈಸೂರು.
5. ಕುಮಾರ್, ಹೂಟಗಳ್ಳಿ, ಮೈಸೂರು.
6. ಅಶ್ವತ್‌ನಾರಾಯಣ್, ಮೈಸೂರು.
7. ಅಶೋಕ್, ಮೈಸೂರು

*********

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದನ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡಂತಿರುತ್ತವೆ :

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| | ಶ್ರೀ ರವಿಕುಮಾರ್ ವಿಜಯನಗರ 1ನೇ ಹಂತ | ಮೊದಲನೆಯದಾಗಿ ಉಪ ವಿಭಾಗಧಿಕಾರಿ ಯವರು ಹಾಗೂ ಶಾಖಾಧಿಕಾರಿಯವರು ತಮ್ಮ ಎಲ್ಲಾ ದೂರುಗಳಿಗೆ ಸ್ಪಂದಿಸುತ್ತಿರುವುದಾಗಿ ಅಭಿನಂದನೆ ಯನ್ನು ತಿಳಿಸಿದರು.<br>▪ ವಿಜಯನಗರ 1ನೇ ಹಂತದ ರಸ್ತೆ ಬದಿಯಲ್ಲಿರುವ ಕಂಬ ದಿಂದಾಗಿ ಜನರಿಗೆ ತೊಂದರೆ ಯಾಗುತ್ತಿದ್ದು, ಈ ಕಂಬವನ್ನು ಸ್ಥಳಾಂತರಿಸಲು ಕೋರಿರುತ್ತಾರೆ.<br>▪ ವಿಜಯನಗರ 'ಬಿ' ಬ್ಲಾಕ್ ನಲ್ಲಿ ಎರಡು ಮಧ್ಯಂತರ ಕಂಬವನ್ನು ಅಳವಡಿಸಲು ಕೋರಿರುತ್ತಾರೆ.<br>▪ 1912 ನಲ್ಲಿ ದೂರನ್ನು ಸ್ವೀಕರಿಸಲು ಅಡೆತಡೆಗಳಾಗು ತ್ತಿರುತ್ತದೆ. ಮತ್ತು ಹೂಟಗಳ್ಳಿ ಉಪವಿಭಾಗ ದವರು ದೂರುಗಳನ್ನು ಸ್ವೀಕರಿಸಿ ಕೂಡಲೆ ತೊಂದರೆಯನ್ನು ನಿವಾರಿಸಿರುತ್ತಾರೆ ಎಂದು ಪ್ರಶಂಸನೀಯ ವ್ಯಕ್ತ ಪಡಿಸಿರುತ್ತಾರೆ. | ಮಾನ್ಯಅಧೀಕ್ಷಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಯವರಿಗೆ ಪ್ರಶಂಸನೀಯ ವ್ಯಕ್ತ ಪಡಿಸಿದ ರವಿಕುಮಾರ್ ರವರಿಗೆ ವಂದನೆಗಳನ್ನು ತಿಳಿಸಿದರು.<br>▪ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ವಿಜಯನಗರ 1ನೇ ಹಂತ ಮತ್ತು ವಿಜಯನಗರ 'ಬಿ' ಬ್ಲಾಕ್‌ನ್ನು ಕೂಡಲೇ ಸ್ಥಳ ಪರಿಶೀಲಿಸಿ, ಅಂದಾಜು ಪಟ್ಟಿ ತಯಾರಿಸಿ ಸೂಕ್ತ ಕ್ರಮಕ್ಕೆಗೊಳ್ಳಲು ಸೂಚಿಸಿರುತ್ತಾರೆ.<br>▪ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಅಡಚಣೆ ಸಂಬಂಧಿತ ದೂರುಗಳನ್ನು ದಾಖಲಿಸಲು ಚಾ.ವಿ.ಸ.ನಿ.ನಿ 24X7 ಸೇವಾ ಕೇಂದ್ರದ ಶುಲ್ಕರಹಿತ ಸಂಖ್ಯೆ 1912 ಅಥವಾ www.cescmysorepgrs.com ವೆಬ್ ವಿಳಾಸವನ್ನು ಬಳಸಿ ಗ್ರಾಹಕರು ದೂರುಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸ ಬಹುದಾಗಿ ತಿಳಿಸಿದ್ದರು. ಹಾಗೂ ಮಳೆಗಾಳಿಯ ಸಂಧರ್ಭದಲ್ಲಿ ಬಹಳಷ್ಟು ಗ್ರಾಹಕರು ಒಂದೆ ವೇಳೆಯಲ್ಲಿ 1912 ಕ್ಕೆ ಕರೆ ಮಾಡುವ ಸಂಧರ್ಭದಲಿ ಮಾತ್ರ ಅಡೆತಡೆ ಯಾಗಬಹುದು. ಬೇರೆ ಸಂಧರ್ಭದಲ್ಲಿ ದೂರುಗಳಿಗೆ ಉತ್ತರಿಸುತ್ತಾರೆಂದು ಉತ್ತರಿಸಿದರು. |

| | | | |
|---|---|---|---|
| | ಕುಮಾರ್ ಹೂಟಗಳ್ಳಿ ಮೈಸೂರು. | ಹಮ್ಮಿಕೊಂಡಿರುವ ವಿಚಾರವನ್ನು ಒಂದು ವಾರ ಅಥವಾ 10 ದಿನ ಮುಂಚಿತವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಲು ಕೋರಿರುತ್ತಾರೆ.<br>▪ ತಾತ್ಕಾಲಿಕ ವಿದ್ಯುತ್‌ಸರಬರಾಜಿನ ಎ.ಸಿ.ಸಿ ಮೊತ್ತ ವನ್ನು ಗ್ರಾಹಕರ ಪತ್ರವಿಲ್ಲದೆ ಮೊತ್ತವನ್ನು ಶಾಶ್ವತ ಆರ್.ಆರ್.ಸಂಖ್ಯೆಗೆ ಹೊಂದಾಣಿಕೆ ಮಾಡಲು ಕೋರಿರುತ್ತಾರೆ.<br>▪ ಒಂದೆ ಸ್ಥಳದಲ್ಲಿ ಅಭಿವೃದ್ಧಿ ಶುಲ್ಕವನ್ನು ಪಾವತಸಿದ್ದು ಈ ಶುಲ್ಕವನ್ನು ಬೇರೆ ಆರ್.ಆರ್. ಸಂಖ್ಯೆಗೆ ಬದಲಾಯಿಸಿ ಕೊಡಲು ಕೋರಿರುತ್ತಾರೆ.<br>▪ ಹಾಲಿ ಇರುವ ಸ್ಥಾವರಗಳಿಗೆ ಟ್ಯಾಪಿಂಗ್ ವಿದ್ಯುತ್ ಸಂಪರ್ಕ ಪಡೆದುಕೊಳ್ಳುವ ಸಮಯದಲ್ಲಿ ಇಲಾಖೆಯಿಂದ ಇತ್ತೀಚಿನ ಮಾಲಿಕತ್ವದ ಪುರಾವೆ ದಾಖಲಾತಿಗಳನ್ನು ಒದಗಿಸಲು ಸೂಚಿಸಿರುತ್ತಾರೆ. ಇದನ್ನು ಪಡೆಯದೇ ಇರಲು ಸಂಬಂಧ ಪಟ್ಟವರಿಗೆ ಸೂಚಿಸಬೇಕಾಗಿ ಕೋರಿರುತ್ತಾರೆ. | ಇಂಜಿನಿಯರ್(ವಿ) ರವರು ಒಂದು ವಾರ ಅಥವಾ 10 ದಿನಗಳ ಮುಂಚಿತವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡುವುದು ಒಳ್ಳೆಯ ವಿಷಯ ಹಾಗೂ ಬಹಳಷ್ಟು ಜನರಿಗೆ ಸಭೆಯ ಬಗ್ಗೆ ವಿಚಾರ ತಿಳಿಯುವುದು ಮತ್ತು ಈ ಸಂಧರ್ಭದಲ್ಲಿ ಅವರು ತಮ್ಮ ದೂರುಗಳನ್ನು ನಿವಾರಿಸಿಕೊಳ್ಳಲು ಅನುಕೂಲವಾಗುತ್ತದೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರಿಸಿದರು.<br>▪ ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ) ರವರು ಗ್ರಾಹಕರು ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಹೊಂದುವ ಸಲುವಾಗಿ ಬೇರೆ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ತೆಗೆದುಕೊಳ್ಳುವ ಸಾಧ್ಯವಿರುತ್ತದೆ. ಆದ್ದರಿಂದ ಎ.ಸಿ.ಸಿ ಮೊತ್ತವನ್ನು ಪತ್ರವಿಲ್ಲದೇ ವ್ಯವಹರಿಸಲು ಸಾಧ್ಯವಿಲ್ಲ ಹಾಗೂ ಮೊತ್ತವನ್ನು ಪತ್ರ ವ್ಯವಹಾರದ ಮುಖೇನವೇ ಹೊಂದಾಣಿಕೆ ಮಾಡಲು ಸಾಧ್ಯವೆಂದು ತಿಳಿಸಿರುತ್ತಾರೆ.<br>▪ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಒಂದು ವಿಳಾಸದಲ್ಲಿರುವ ಅಭಿವೃದ್ಧಿ ಶುಲ್ಕವನ್ನು ಬೇರೊಂದು ಆರ್.ಆರ್.ಸಂಖ್ಯೆಗೆ ಮೊತ್ತವನ್ನು ವರ್ಗಾಹಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. |
| 3 | ಮಹದೇವ, ಹಿನಕಲ್, ಮೈಸೂರು | ▪ ರಿಂಗ್ ರಸ್ತೆಯಲ್ಲಿ ಅಗಲೀಕರಣದ ಸಂಬಂಧ ಸಾರ್ವಜನಿಕರಿಗೆ ಸಂಚರಿಸಲು ಬಹಳಷ್ಟು ತೊಂದರೆಯಾಗಿರುತ್ತದೆ ಎಂದು ತಿಳಿಸಿದರು. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಹೂಟಗಳ್ಳಿ ವ್ಯಾಪ್ತಿಯ ಹಿನಕಲ್ ಸಿಗ್ನಲ್‌ನ ಬಳಿ ಮೇಲ್ಸೇತುವೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

| | | | |
|---|---|---|---|
| | | | ಇದಕ್ಕೆ ಸಂಬಂಧಿಸಿದಂತೆ ನಮ್ಮ ಇಲಾಖೆಯ ಕಂಬಗಳನ್ನು ಈಗಾಗಲೇ ರಸ್ತೆ ಬದಿಗೆ ಸ್ಥಳಾಂತರಿಸಲಾಗಿರುತ್ತದೆ. ಹಾಗೂ ಕಾಮಗಾರಿಯು ನಮ್ಮ ಇಲಾಖಾ ವ್ಯಾಪ್ತಿಗೆ ಸಂಬಂಧಿಸಿರುವುದಿಲ್ಲ ವೆಂದು ತಿಳಿಸಿದರು. |
| 4 | ಶ್ರೀ ರಂಗ ಪ್ರಸಾದ್ # 124, ಕೆ.ಹೆಚ್.ಬಿ ಕಾಲೋನಿ, ಹೂಟಗಳ್ಳಿ | ▪ ತಮ್ಮ ಮನೆಯ ಪಕ್ಕದಲ್ಲಿ ಕಂಬವು ಶಿಥಿಲಗೊಂಡಿದ್ದು ಈ ದೂರನ್ನು ಈಗಾಗಲೆ ಸಲ್ಲಿಸಿದ್ದು, ಕಾಮಗಾರಿಯು ಪೂರ್ಣಗೊಂಡಿ ರುವುದಕ್ಕೆ ಪ್ರಶಂಸನೀಯ ವ್ಯಕ್ತ ಪಡಿಸಿರುತ್ತಾರೆ. ಹಾಗೂ ತಮ್ಮ ಮನೆಯ ಮುಂದಿನ ಕಂಬವನ್ನು ಸ್ಥಳಾಂತರಿಸಿ, ಯು.ಜಿ ಕೇಬಲಿನ ಮುಖಾಂತರ ಸಂಪರ್ಕ ಒದಗಿಸಲು ತಿಳಿಸಿರುತ್ತಾರೆ. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ, ವಿದ್ಯುತ್ ಕಂಬವನ್ನು ಬೇರೆಡೆಗೆ ಸ್ಥಳಾಂತರ ಮಾಡಬೇಕಾದಲ್ಲಿ ಗ್ರಾಹಕರು ಸ್ವಯಂ ಕಾರ್ಯನಿರ್ವಾಹಣೆ ಯೋಜನೆಯಡಿ ಕೆಲಸ ನಿರ್ವಹಿಸ ಬೇಕಾಗಿದ್ದು, ಈ ಸಂಬಂಧ ನಿಗಮವತಿಯಿಂದ ಅಂದಾಜುಪಟ್ಟಿ ತಯಾರಿಸಿ ಕ್ರಮಕೈಗೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ಸೂಚನೆಯನ್ನು ನೀಡಿದರು. |
| 5 | ಶ್ರೀಮತಿ ಭಾಗ್ಯ, ಹಿನಕಲ್, ಮೈಸೂರು | ▪ ಹಿನಕಲ್ ವ್ಯಾಪ್ತಿಯ ಅರಳಿ ಮರದ ಬಳಿ ಇರುವ ಪರಿವರ್ತಕ ದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಈ ಪರಿವರ್ತಕವನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಕೋರಿರುತ್ತಾರೆ.<br>▪ ISD ಇಲ್ಲದೆ ಅಂಗನವಾಡಿ ಹಾಗೂ ಬಡಜನರಿಗೆ ವಿದ್ಯುತ್ ಸಂಪರ್ಕ ನೀಡಲು ಕೋರಿರುತ್ತಾರೆ. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸದಾಗಿ ಶಾಖಾಧಿಕಾರಿಯವರು ಅರಳಿ ಮರದ ಪರಿವರ್ತಕ(111613)ವನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಸೂಕ್ತ ಸ್ಥಳವಿಲ್ಲವೆಂದು ತಿಳಿಸಿದ್ದರು. ಹಾಗೂ ಸೂಕ್ತ ಸ್ಥಳ ನೀಡಿದಲ್ಲಿ, ಸ್ವಯಂ ಕಾರ್ಯನಿರ್ವಾಹಣೆ ಯೋಜನೆಯಡಿ ಈ ಪರಿವರ್ತಕ ವನ್ನು ಸ್ಥಳಾಂತರಿಸಬಹುದೆಂದು ತಿಳಿಸಿದರು.<br>▪ ಮಾನ್ಯಅಧೀಕ್ಷಕ ಇಂಜಿನಿಯರ್(ವಿ) ರವರು ಭದ್ರತಾ ಠೇವಣಿಯಿಲ್ಲದೇ ಯಾವುದೇ ವಿದ್ಯುತ್ ಸಂಪರ್ಕವನ್ನು ನೀಡಲು ಸಾದ್ಯವಿಲ್ಲವೆಂದು ತಿಳಿಸಿದರು. |

ಮಾನ್ಯಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ, ಗ್ರಾಹಕರು ಈ ಸಭೆಯಲ್ಲಿ ದಾಖಲಿಸಿದ ದೂರುಗಳನ್ನು ಆಧ್ಯತೆ ಮೇರೆಗೆ ಬಗೆಹರಿಸುವುದಾಗಿ ತಿಳಿಸಿ, ಭಾಗವಹಿಸಿದ ಎಲ್ಲಾ ಗ್ರಾಹಕರಿಗೆ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಹೂಟಗಳ್ಳಿ ಉಪವಿಭಾಗ,
ಮೈಸೂರು.

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಿಭಾಗ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ.